ಅನುದಾನಿತ ಕಾಲೇಜು :

(1) ಜೆ.ಸಿ.ಟಿ. ಎಂ. ಕಾಲೇಜು, ಶೃಂಗೇರಿ

ಖಾಲಿ ಇರುವ ಹುದ್ದೆಗಳ ವಿವರ

ಬೋಧಕರ ಹುದ್ದೆ	ಬೋಧಕೇತರರ ಖಾಲಿ ಹುದ್ದೆ
10	06

(2) ಕೊಪ್ಪ ಮತ್ತು ಎನ್ ಆರ್. ಪುರಂಗಳಲ್ಲಿ ಅನುದಾನಿತ ಕಾಲೇಜುಗಳು ಇರುವುದಿಲ್ಲ.

ಆ) 1. ಸರ್ಕಾರಿ ಕಾಲೇಜಿಗೆ ಸಂಬಂಧಿಸಿದಂತೆ:

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ

(ಅ) ಬೋಧಕರು : 2004–05ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಕಾರ್ಯಭಾರ ಪರಿಶೀಲಿಸಿ ಅವಶ್ಯಕತೆಗೆ ಅನುಗುಣವಾಗಿ 2004–05ನೇ ಸಾಲಿನ ಕಾರ್ಯಭಾರಕ್ಕೆ ಅನುಗುಣವಾಗಿ ಇತರೇ ಕಾಲೇಜಿನಲ್ಲಿ ಹೆಚ್ಚುವರಿಯಾಗಿರುವ ಬೋಧಕರನ್ನು ಸದರಿ ಕಾಲೇಜಿಗೆ ಅನ್ಯಕಾರ್ಯ ನಿಮಿತ್ತ ನಿಯುಕ್ತಿಗೊಳಿಸಲಾಗುವುದು.

(ಆ) ವರ್ಗಾವಣೆ ಮೂಲಕ ಖಾಲಿಯಿರುವ ಬೋಧಕೇತರ ಹುದ್ದೆಗಳನ್ನು ತುಂಬಲಾಗುವುದು.

2. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ

(ಅ) ಬೋಧಕರ ಹುದ್ದೆ ಖಾಲಿ ಇರುವುದಿಲ್ಲ.

(ಆ) ವರ್ಗಾವಣೆ ಮೂಲಕ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲಾಗುವುದು.

3. ಅನುದಾನಿತ ಕಾಲೇಜಿಗೆ ಸಂಬಂಧಿಸಿದಂತೆ:

(ಅ) ಖಾಲಿ ಇರುವ ಬೋಧಕರ ಹುದ್ದೆಗಳನ್ನು ತುಂಬುವ ಬಗ್ಗೆ ಸಂಬಂಧಿಸಿದ ಆಡಳಿತ ಮಂಡಳಿಯಿಂದ ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ಆ) ಸರ್ಕಾರದ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಬೋಧಕೇತರ ಹುದ್ದೆಗಳನ್ನು ತುಂಬಲು ನಿರ್ಭಂಧವಿದೆ.

ರಾಜ್ಯದಲ್ಲಿ ಹನಿ ಮತ್ತು ತುಂತುರು ನೀರಾವರಿಗೆ ಸಹಾಯ ಧನ

90 (47) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹನಿ ಮತ್ತು ತುಂತುರು ನೀರಾವರಿಗೆ 2003–04ನೇ ಸಾಲಿನಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದೆ ಮತ್ತು ಬಿಡುಗಡೆ ಮಾಡಿದ ಸಹಾಯಧನ ಎಷ್ಟು: (ಜಿಲ್ಲಾವಾರು ಮತ್ತು ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹನಿ ಮತ್ತು ತುಂತುರು ನೀರಾವರಿಗೆ 2003–04ನೇ ಸಾಲಿನಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಸಹಾಯಧನಗಳ ವಿವರ ಇಂತಿದೆ.

ಕ್ರಮ ಸಂ.	ವರ್ಷ	ಹಾನಿ	ತುಂತುರು	ರೈನ್‌ಗನ್	ಒಟ್ಟು
1.	2003–04 ನಿಗದಿತ ಗುರಿ	106.25	278.30	8.20	402.75
2.	2003–04 ಅನುದಾನ ಬಿಡುಗಡೆ	197.25	195.10	24.00	410.25
3.	2004–05 ನಿಗದಿತ ಗುರಿ	225.00	350.00	25.00	600.00

ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ–1

ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 47

ಹನಿ ಮತ್ತು ತುಂತುರು ನೀರಾವರಿ ಯೋಜನೆಯ ವಿವರಗಳು

ಕ್ರ. ಸಂ.	ಜಿಲ್ಲೆ	2003–04		*2004–05
		ಬಿಡುಗಡೆಯಾದ	ವೆಚ್ಚ ಅನುದಾನ	ತಾತ್ಕಾಲಿಕ ಗುರಿ
1	ಬೆಂಗಳೂರು (ನ)	1.29	0.72	3.22
2	ಬೆಂಗಳೂರು (ಗ್ರಾ)	3.00	4.78	5.59
3	ಕೋಲಾರ	0.37	0.31	12.77
4	ತುಮಕೂರು	10.61	10.84	23.97
5	ಶಿವಮೊಗ್ಗ	11.78	11.81	11.75
6	ಚಿತ್ರದುರ್ಗ	19.64	15.92	31.68
7	ದಾವಣಗೆರೆ	25.03	25.01	18.18
8	ಮೈಸೂರು	9.76	9.74	12.99
9	ಚಾಮರಾಜನಗರ	1.07	0.98	6.59
10	ಮಂಡ್ಯ	8.00	8.01	17.90
11	ಕೊಡಗು	16.41	16.40	13.29
12	ಹಾಸನ	8.66	8.66	20.94
13	ಚಿಕ್ಕಮಗಳೂರು	5.49	5.52	5.74
14	ದಕ್ಷಿಣ ಕನ್ನಡ	10.28	10.26	11.16
15	ಉಡುಪಿ	5.71	5.69	14.25
16	ಧಾರವಾಡ	14.56	15.06	24.96
17	ಗದಗ	14.23	13.56	12.31
18	ಹಾವೇರಿ	18.7	18.69	37.26
19	ಉತ್ತರ ಕನ್ನಡ	4.44	2.57	9.08
20	ಬೆಳಗಾಂ	65.79	65.79	70.00

1	2	3	4	5
21	ಬಿಜಾಪುರ	41.12	41.30	47.60
22	ಬಾಗಲಕೋಟೆ	51.33	51.31	38.14
23	ರಾಯಚೂರು	9.88	7.17	24.72
24	ಕೊಪ್ಪಳ	15.18	15.25	24.76
25	ಬಳ್ಳಾರಿ	8.77	8.70	28.18
26	ಗುಲ್ಬರ್ಗಾ	10.01	9.99	53.19
27	ಬೀದರ್	19.14	18.71	19.78
	ಒಟ್ಟು	410.25	402.75	600.00

* 2004–05 ಸಾಲಿನ ಹಣ ಬಿಡುಗಡೆ ಮಾಡಬೇಕಾಗಿದೆ.

ಅನುಬಂಧ–2

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 47

ಹನಿ ಮತ್ತು ತುಂತುರು ನೀರಾವರಿ ಯೋಜನೆಯ ವಿವರಗಳು

ಕ್ರ. ಸಂ.	ತಾಲ್ಲೂಕ್	2003–04ನೇ ಸಾಲಿನ ಪ್ರಗತಿ ಭೌತಿಕ (ಸಂಖ್ಯೆ)	ಆರ್ಥಿಕ (ರೂ. ಗಳಲ್ಲಿ)	2004–05ನೇ ಸಾಲಿನ ಕಾರ್ಯಕ್ರಮ
1	ಚಿಕ್ಕಮಗಳೂರು	11	74134	ಜಿಲ್ಲೆಗೆ ರೂ. 5.74 ಲಕ್ಷಗಳ
2	ಮೂಡಿಗೆರೆ	11	84915	ಕಾರ್ಯಕ್ರಮ ನೀಡಿದ್ದು
3	ಕಡೂರು	24	138800	ತಾಲ್ಲೂಕುವಾರು
4	ತರಿಕೆರೆ	26	128558	ಕಾರ್ಯಕ್ರಮ
5	ನರಸಿಂಹರಾಜಪುರ	0	0	ರೂಪಿಸಲಾಗುತ್ತಿದೆ.
6	ಕೊಪ್ಪ	8	51452	
7	ಶೃಂಗೇರಿ	13	74347	
	ಒಟ್ಟು	93	552206	

ಬೆಂಗಳೂರು ನಗರದಲ್ಲಿರುವ ಖಾಸಗೀ ವಿಶ್ವವಿದ್ಯಾಲಯಗಳು

91 (77) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು;

ಆ) ಇವುಗಳು ವಿದೇಶದ ವಿಶ್ವವಿದ್ಯಾಲಯ ಹಾಗೂ ಛತ್ತೀಸ್‌ಘಡದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳೊಡನೆ ಹೊಂದಾಣಿಕೆ ಮಾಡಿಕೊಂಡು ವಿದ್ಯಾರ್ಥಿಗಳನ್ನು ವಿವಿಧ ಪದವಿ ಹಾಗೂ ಇತರ ಕೋರ್ಸ್‌ಗಳಿಗೆ ಸೇರಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ರೀತಿ ನಡೆಯುತ್ತಿರುವ ಖಾಸಗೀ ವಿಶ್ವವಿದ್ಯಾಲಯಗಳನ್ನು ಮುಚ್ಚಿಸಲು ಕೈಗೊಳ್ಳಲಿರುವ ಕ್ರಮಗಳೇನು?